ಖೂ) ಎಲ್ಲಾ ಅನುದಾನಿತ ಸಂಸ್ಥೆಗಳ ನೌಕರರಿಗೆ ಅನ್ವಯಿಸುವಂತೆ ಸಮಿತಿಯ ನೌಕರರಿಗೂ ಸಹ ಪರಿಷ್ಕೃತ ವೇತನವನ್ನು ಸರ್ಕಾರಿ ಆದೇಶ ಸಂಖ್ಯೆ ಇಡಿ 4 ವಿವಿಧ 94ರ ಪ್ರಕಾರ ವಿಸ್ತರಿಸಲಾಗಿದೆ.

**ರಾಜ್ಯದಲ್ಲಿರುವ ಕ್ರೀಡಾಂಗಣದಲ್ಲಿರುವ ಸಂಖ್ಯೆ ಕುರಿತು**

693 - ಶ್ರೀ ಯು,ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳಿವೆ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳಿಲ್ಲ.*

ಆ) *ಕ್ರೀಡಾಂಗಣ ಇಲ್ಲದ ತಾಲ್ಲೂಕುಗಳಲ್ಲಿ ಎಷ್ಟು ವರ್ಷಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು?*

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 68 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಪ್ರಾರಂಭಿಸಿದೆ. ಉಳಿದ ತಾಲ್ಲೂಕುಗಳಲ್ಲಿ ಇರುವುದಿಲ್ಲ.

ಆ) ಸೂಕ್ತ ನಿವೇಶನ ಹಾಗೂ ಆಯವ್ಯಯದ ಹಂಚಿಕೆ ದೊರಕಿದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ಕೈಗೆತ್ತಿಕೊಳ್ಳಲಾಗುವುದು.

**ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಕುರಿತು**

798 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಖಾಲಿ ಇರುವ ಹುದ್ದೆಗಳನ್ನು ತುಂಬಲು ಏನು ಕ್ರಮ ಕೈಗೊಳ್ಳಲಾಗಿದೆ:*

ಇ) *ಖಾಲಿ ಇರುವ ಈ ಹುದ್ದೆಗಳಿಗೆ ಗ್ರಾಮಗಳಲ್ಲಿ ಇರುವ ನಿರುದ್ಯೋಗಿ ಟಿಸಿಹೆಚ್ ಯುವಕರನ್ನು ತಾತ್ಕಾಲಿಕವಾಗಿ ನೇಮಿಸಲು ಸರ್ಕಾರದವರು ಆಲೋಚಿಸುವರೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ)

| | ಜಿಲ್ಲೆ | 13170 ಹುದ್ದೆ |
|---|---|---|
| 1. | ಬೆಂಗಳೂರು ಉತ್ತರ | - |
| 2. | ಬೆಂಗಳೂರು ದಕ್ಷಿಣ | 147 |
| 3. | ಬೆಂಗಳೂರು ಗ್ರಾಮಾಂತರ | 735 |
| 4. | ತುಮಕೂರು | 776 |
| 5. | ಕೋಲಾರ | 351 |
| 6. | ಚಿತ್ರದುರ್ಗ | 886 |
| 7. | ಶಿವಮೊಗ್ಗ | 211 |
| 8. | ಮೈಸೂರು | 378 |

| | | |
|---|---|---|
| 9. | ಮಂಡ್ಯ | 313 |
| 10. | ಮಡಿಕೇರಿ | 136 |
| 11. | ಹಾಸನ | 384 |
| 12. | ಚಿಕ್ಕಮಗಳೂರು | 186 |
| 13. | ದಕ್ಷಿಣ ಕನ್ನಡ | 912 |
| 14. | ಬೆಳಗಾವಿ | 722 |
| 15. | ಬಿಜಾಪುರ | 576 |
| 16. | ಧಾರವಾಡ | 1213 |
| 17. | ಉತ್ತರಕನ್ನಡ | 385 |
| 18. | ಗುಲ್ಬರ್ಗ | 404 |
| 19. | ಬೀದರ್ | 595 |
| 20. | ರಾಯಚೂರು | 310 |
| 21. | ಬಳ್ಳಾರಿ | 495 |
| ಕಪ್ಪು ಹಲಗೆ ಕಾರ್ಯಾಚರಣೆಗೆ 5 ಮತ್ತು 6ನೇ ಹಂತದಲ್ಲಿ ಮಂಜೂರಾದ ಹುದ್ದೆಗಳು | | 3195 |
| | ಒಟ್ಟು | 13170 |

ಅ) ಮುಂದಿನ ಶೈಕ್ಷಣಿಕ ವರ್ಷದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.

ಇ) ಖಾಲಿ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡುವುದರಿಂದ ತಾತ್ಕಾಲಿಕವಾಗಿ ನೇಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಯವರ ನೇಮಕ ಆಗದಿರುವ ಬಗ್ಗೆ**

985 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದಕ್ಷಿಣ ಕನ್ನಡ ಪುತ್ತೂರು ಉಪ್ಪಿನಂಗಡಿ ಹಾಗೂ ಪಾಣಾಜೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರ ನೇಮಕ ಇನ್ನೂ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

*ಆ) ಹಾಗಿದ್ದಲ್ಲಿ, ಸದರಿ ಆರೋಗ್ಯ ಕೇಂದ್ರಗಳಿಗೆ ಯಾವಾಗ ವೈದ್ಯಾಧಿಕಾರಿಗಳನ್ನು ನೇಮಿಸಲಾಗುವುದು?*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಬಂದಿದೆ. ಪಾಣಾಜೆ ಆರೋಗ್ಯ ಕೇಂದ್ರದಲ್ಲಿ ಎರಡು ವೈದ್ಯರ ಹುದ್ದೆಗಳು ಖಾಲಿ ಇದ್ದು ಅದರಲ್ಲಿ 1 ಹುದ್ದೆಗೆ ದಿನಾಂಕ 10-2-95ರಂದು ಗುತ್ತಿಗೆ ಆಧಾರದ